








ಭಾಷೆಯ ಸ್ಥಾನ ನೀಡಲು ಮುಂದಾಯಿತು. ಈ ಚಳವಳಿ 'ವಿ.ಕೃ. ಗೋಕಾಕ್ ಚಳವಳಿ'ಯಾಗಿ, ನಂತರ 'ಗೋಕಾಕ್ ಚಳವಳಿ' ಎಂದೇ ಕನ್ನಡಿಗರ ಮನದಲ್ಲಿ ಉಳಿದಿದೆ.

ಗೋಕಾಕ್ ಚಳವಳಿಯ ಹಿನ್ನೆಲೆ, ಚಳವಳಿಯ ಹಿಂದಿನ ಶ್ರಮ, ಹೋರಾಟವನ್ನು ಗುರ್ತಿಸುವ ಪ್ರಯತ್ನ ರಾಯಚೂರಿನಲ್ಲಿ ಇತ್ತೀಚೆಗೆ ನಡೆಯಿತು. ಕನ್ನಡ ನಾಡಿನ ಉದ್ದಗಲಕ್ಕೂ ಹೋರಾಟವನ್ನು ಕೊಂಡೊಯ್ದ ಗಣ್ಯರನ್ನು ಸ್ಮರಿಸುವ ಹಾಗೂ ಚಳವಳಿಗೆ ನಲವತ್ತು ವರ್ಷಗಳು ಪೂರೈಸಿರುವ ಸಂಭ್ರಮವನ್ನು ಆಚರಿಸುವ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು.

'ಕರ್ನಾಟಕ ಸುವರ್ಣ ಸಂಭ್ರಮ 50'ರ ಹಿನ್ನೆಲೆಯಲ್ಲಿ, ರಾಯಚೂರು ನಗರದ 'ಕೃಷಿ ಮತ್ತು ವಿಜ್ಞಾನ ವಿಶ್ವವಿದ್ಯಾಲಯ'ದಲ್ಲಿ 'ಗೋಕಾಕ್ ಚಳವಳಿಯ ಹಿನ್ನೋಟ–ಮುನ್ನೋಟ' ಎಂಬ ಕಾರ್ಯಕ್ರಮ ರೂಪುಗೊಂಡಿತ್ತು. ಗೋಕಾಕ್ ಚಳವಳಿಯ ಸಮೃದ್ಧ ಇತಿಹಾಸವು ಕನ್ನಡ ನಾಡಿನಲ್ಲಿ ಕನ್ನಡವನ್ನು ಇನ್ನಷ್ಟು ಆಸ್ಥೆಯಿಂದ ಕಟ್ಟಲು ಪ್ರೇರಣೆಯಾಗಲಿ ಎನ್ನುವ ಮಹಾತ್ವಾಕಾಂಕ್ಷೆಯಿಂದ ನಡೆದ ಕಾರ್ಯಕ್ರಮವನ್ನು 'ಕನ್ನಡ ಅಭಿವೃದ್ಧಿ ಪ್ರಾಧಿಕಾರ' ಮತ್ತು ರಾಯಚೂರು ಜಿಲ್ಲಾಡಳಿತ ಆಯೋಜಿಸಿತ್ತು. ಈ ಕಾರ್ಯಕ್ರಮದ ಭಾಗವಾಗಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಹಮ್ಮಿಕೊಂಡಿದ್ದ ಚಿತ್ರಕಲಾ ಶಿಬಿರದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಹಲವಾರು ಕಲಾಕೃತಿಗಳು ಅರಳಿ ನಿಂತಿದ್ದವು.

ಗೋಕಾಕ್ ಚಳವಳಿ, ಕರ್ನಾಟಕ, ಕನ್ನಡ ಭಾಷಾಭಿಮಾನವು ಚಿತ್ರಕಲಾ ಶಿಬಿರದಲ್ಲಿ ಕಲಾಕೃತಿಗಳ ರೂಪದಲ್ಲಿ ವ್ಯಕ್ತಗೊಂಡಿತ್ತು. ರಾಜಕುಮಾರ್, ಕುವೆಂಪು, ಎಂ. ಚಿದಾನಂದ ಮೂರ್ತಿ, ಜಿ. ನಾರಾಯಣ ಕುಮಾರ್, ಪಾಟೀಲ ಪುಟ್ಟಪ್ಪ, ಎಂ.ಆರ್. ಹಡಪದ, ಜಿ.ಕೆ. ಸತ್ಯ, ವಿ.ಕೃ. ಗೋಕಾಕ್, ಚಂಪಾ, ಪಿ.ವಿ. ನಾರಾಯಣರ ಚಿತ್ರಗಳು ಕ್ಯಾನ್ವಾಸ್‌ನಲ್ಲಿ ಜೀವತಳೆದಿದ್ದವು. ಗೋಕಾಕ್ ಚಳವಳಿಯನ್ನು ತಮ್ಮದೇ ದೃಷ್ಟಿಕೋನದಲ್ಲಿ ಕಲಾವಿದರು ಸೃಜನಾತ್ಮಕವಾಗಿ ಚಿತ್ರಿಸಿದ್ದರು.

ಪ್ರಭಾಕರ ಮಂಕಲ್, ಹೇಮರೆಡ್ಡಿ ಎನ್., ಸಿದ್ದನಗೌಡ ಗಬಸಾವಳಗಿ, ಸಿದ್ದು ಮರಗೋಳ, ಹಣಮಂತ್ರಾಯ ತಳವಾರ, ಮಹಮ್ಮದ್ ರಫಿ, ಮಲ್ಲಿಕಾರ್ಜುನ ಅಪಗುಂಡಿ, ಮಂಜುನಾಥ, ಅಶೋಕ ಕುಮಾರ ಹಿರೇಮಠ, ವೆಂಕಟೇಶ ನಾಗರಬಂಡಿ, ಅಮಿನರೆಡ್ಡಿ ಎನ್, ಅಬ್ದುಲ್ ಭಾಷ ನಾಯ್ಕಲ್, ರಮ್‌ಜಾನ್ ಬಿ.ಪಿ., ಅಂಬಣ್ಣ ನಾಯಕ್, ಯುವರಾಜ ಆರ್.ಎಸ್., ಚಿದಾನಂದ ಸುತಾರ, ಹುಲುಗಪ್ಪ, ಶರಣಬಸವ ಎಂ, ಶಿವಪ್ರಸಾದ ಬನ್ನಟ್ಟಿ ಮುಂತಾದ ಕಲಾವಿದರು ಕನ್ನಡದ ಇತಿಹಾಸವನ್ನು, ಪ್ರೀತಿಯನ್ನು ಕಲೆಯ ಮೂಲಕ ತೆರೆದಿಟ್ಟಿದ್ದರು.

ನೋಡುಗರಲ್ಲಿ ಕನ್ನಡ ನಾಡಿನ ಬಗ್ಗೆ ಅಭಿಮಾನ, ಪ್ರೀತಿಯನ್ನು ಸ್ಫುರಿಸುತ್ತಿದ್ದ ಈ ಕಲಾಕೃತಿಗಳು ಗೋಕಾಕ್ ಚಳವಳಿಯ ನೆನಪುಗಳನ್ನು ಮೆಲುಕು ಹಾಕಿಸಿದವು. ಕಲಾಕೃತಿಗಳ ಮೂಲಕ 'ಕರ್ನಾಟಕ ಸುವರ್ಣ ಸಂಭ್ರಮ' ನಾಡಿನೆಲ್ಲೆಡೆ ಪಸರಿಸುವ ಪ್ರಯತ್ನಗಳು ಹೆಚ್ಚಾಗಲಿ.

ಪ್ರತಿಕ್ರಿಯಿಸಿ: feedback@sudha.co.in